**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003**

ಸಂಖ್ಯೆ:ಎ8/ಎನ್.ಎಸ್.ಕ್ಯೂ.ಎಫ್./24/2016-17 ದಿನಾಂಕ:06.02.2017.

# ಸುತ್ತೋಲೆ

ವಿಷಯ:-ಎನ್.ಎಸ್.ಕ್ಯೂ.ಎಫ್. ಯೋಜನೆ ಅಡಿಯಲ್ಲಿನ ವೃತ್ತಿ ಶಿಕ್ಷಣ ಕೌಶಲ್ಯಗಳಲ್ಲಿ ಸೈದ್ಧಾಂತಿಕ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆ ಹಾಗೂ ಸಿ.ಸಿ.ಇ.ಅಂತರಿಕಮೌಲ್ಯ ಮಾಪನ ಗಳನ್ನು ನಡೆಸುವ ಬಗ್ಗೆ.

ಉಲ್ಲೇಖ: 1)ಸರ್ಕಾರದ ಆದೇಶದ ಸಂಖ್ಯೆ:ಇಡಿ.59.ಎಂ.ಸಿ.ಡಿ.2016, ಬೆಂಗಳೂರು, ದಿನಾಂಕ:16.06.2016

2)ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ:19.08.2016.

3) ನಿರ್ದೇಶಕರು, ಆರ್.ಎಂ.ಎಸ್.ಎ., ಸಾ.ಶಿ.ಇಲಾಖೆ, ಬೆಂಗಳೂರು ಇವರ ಇ-ಮೇಲ್ ದಿನಾಂಕ:03.02.2017.

********

2016-17ನೇ ಸಾಲಿಗೆ ವೃತ್ತಿ ಶಿಕ್ಷಣ ವಿಷಯಗಳನ್ನು ಆಯ್ದ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವುದು ತಮಗೆ ತಿಳಿದಿರುವ ವಿಷಯವಾಗಿದೆ. ಈ ಬಗ್ಗೆ ಉಲ್ಲೇಖ-2 ರಂತೆ ಮಂಡಳಿಯು ಅಧಿಸೂಚನೆ ಹೊರಡಿಸಿರುವುದನ್ನು ಸ್ಮರಿಸಿದೆ. ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳ ಆಸಕ್ತಿ ಹಾಗೂ ಸ್ವ ಇಚ್ಛೆಯಿಂದ ಹಂತ-1 ಹಾಗೂ ಹಂತ-2(9 ಮತ್ತು 10ನೇ ತರಗತಿ) ರಲ್ಲಿ ತೃತೀಯ ಭಾಷಾ ವಿಷಯದಲ್ಲಿ ವಿನಾಯಿತಿ ಪಡೆದು ವೃತ್ತಿ ಕೌಶಲ್ಯ ವಿಷಯಗಳಾದ ಮಾಹಿತಿ ಹಾಗೂ ತಂತ್ರಜ್ಞಾನ, ರಿಟೇಲ್, ಆಟೋ ಮೊಬೈಲ್, ಹೆಲ್ತ್ ಕೇರ್ ಮತ್ತು ಬ್ಯೂಟಿ ಅಂಡ್ ವೆಲ್‌ನೆಸ್‌ಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದಾರೆ. ಹಂತ-1ರ ವಿದ್ಯಾರ್ಥಿಗಳಿಗೆ 30 ಅಂಕಗಳ ಸೈದ್ಧಾಂತಿಕ ಪರೀಕ್ಷೆ, 50 ಅಂಕಗಳ ಪ್ರಾಯೋಗಿಕ ಪರೀಕ್ಷೆ ಹಾಗೂ 20 ಅಂಕಗಳ ಸಿ.ಸಿ.ಇ. ಆಧಾರಿತ ಆಂತರಿಕ ಮೌಲ್ಯಮಾಪನವನ್ನು ಶಾಲಾ ಹಂತದಲ್ಲಿ ನಡೆಸಲಾಗುತ್ತಿದ್ದು, 30 ಅಂಕಗಳ ಸೈದ್ಧಾಂತಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಂದ ಸಿದ್ಧಪಡಿಸಿ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿಗೆ ನಿಗದಿ ಪಡಿಸಿದ ಪರೀಕ್ಷಾ ದಿನದಂದು ಜಿಲ್ಲಾ ಉಪನಿರ್ದೇಶಕರ ಮುಖಾಂತರ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು. 9ನೇ ತರಗತಿಯ ಪರೀಕ್ಷೆಗಳು ಶಾಲಾ ಹಂತದ ಪರೀಕ್ಷೆಗಳಾಗಿದ್ದು, ರಾಜ್ಯದ ಆಯಾಯಾ ಜಿಲ್ಲೆಗಳಲ್ಲಿ ಉಪನಿರ್ದೇಶಕರ ನೇತೃತ್ವದಲ್ಲಿ ಪರೀಕ್ಷಾ ವೇಳಾ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಪರೀಕ್ಷೆಯನ್ನು ನಡೆಸಲಾಗುತ್ತಿದೆ.

ಆದ್ದರಿಂದ ಎನ್.ಎಸ್.ಕ್ಯೂ.ಎಫ್. ಯೋಜನೆಯಡಿಯಲ್ಲಿನ ವೃತ್ತಿ ಶಿಕ್ಷಣದ ವಿಷಯಗಳಿಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ದಿನಾಂಕವನ್ನು ನಿಗದಿಪಡಿಸಿ ಪರೀಕ್ಷೆಯನ್ನು ನಡೆಸಲಾಗುವುದು.ಈ ಹಿನ್ನಲೆಯಲ್ಲಿ ರಾಜ್ಯಾದ್ಯಾಂತ ಎಲ್ಲಾ ಜಿಲ್ಲೆಗಳ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಹಂತ-1 ರ ವೃತ್ತಿ ಶಿಕ್ಷಣದ ವಿಷಯಗಳ ಪರೀಕ್ಷೆಯನ್ನು ದಿನಾಂಕ:25.03.2017ರ ಶನಿವಾರದಂದು ಮದ್ಯಾಹ್ನ 2 ರಿಂದ 4 ಗಂಟೆಯವರಗೆ ನಡೆಸಲು ನಿರ್ಧರಿಸಿ ಪ್ರಕಟಿಸಲಾಗಿದೆ. ಸಂಬಂಧಿಸಿದ ಶಾಲಾ ಮುಖ್ಯಸ್ಥರು ಹಂತ-1 ರಲ್ಲಿರುವ(9ನೇ ತರಗತಿ) ಎರಡು ವೃತ್ತಿ ಶಿಕ್ಷಣ ವಿಷಯಗಳ ಪರೀಕ್ಷೆಗೆ ವಿದ್ಯಾರ್ಥಿಗಳು ಅಭ್ಯಾಸ ಹಾಗೂ ಸಿದ್ಧತೆ ಮಾಡಿಕೊಳ್ಳಲು ತಿಳಿಸುವುದು 8 ಮತ್ತು 9ನೇ ತರಗತಿಗಳ ಪರೀಕ್ಷೆಗೆ ದಿನಾಂಕ:25.03.2017 ರಂದು ಬೇರೆ ವಿಷಯಗಳನ್ನು ನಿಗದಿ ಪಡಿಸಿ ಈಗಾಗಲೇ ವೇಳಾಪಟ್ಟಿಯನ್ನು ಸಿದ್ದಪಡಿಸಿದ್ದರೂ ಸಹ ಸದರಿ ದಿನಾಂಕದಂದು ಬೆಳಿಗ್ಗೆ ಇತರೆ ವಿಷಯಗಳ ಪರೀಕ್ಷೆ ಮುಗಿದ ನಂತರ ಮದ್ಯಾಹ್ನ 2 ರಿಂದ 4 ಗಂಟೆಯವರಗೆ ವೃತ್ತಿ ಶಿಕ್ಷಣ ವಿಷಯಗಳ ಪರೀಕ್ಷೆ ನಡೆಸಲು ತಿಳಿಸಿದೆ. ಇನ್ನು 8

ಹಾಗೂ 9ನೇ ತರಗತಿಯ ಪರೀಕ್ಷೆಗಾಗಿ ಜಿಲ್ಲಾ ಮಟ್ಟದಲ್ಲಿ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸದೇ ಇರುವ ಜಿಲ್ಲೆಗಳಲ್ಲಿ ಜಿಲ್ಲಾ ಉಪನಿರ್ದೇಶಕರು ವೃತ್ತಿಶಿಕ್ಷಣ ವಿಷಯವನ್ನು ನಿಗದಿ ಪಡಿಸಿದ ದಿನಾಂಕದಂದು ವೇಳಾಪಟ್ಟಿಯಲ್ಲಿ ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳವುದು,

ವೃತ್ತಿ ಶಿಕ್ಷಣದ ವಿಷಯಗಳಾದ ಮಾಹಿತಿ ಹಾಗೂ ತಂತ್ರಜ್ಞಾನ, ರಿಟೇಲ್, ಆಟೋ ಮೊಬೈಲ್, ಹೆಲ್ತ್ ಕೇರ್ ಮತ್ತು ಬ್ಯೂಟಿ ಅಂಡ್ ವೆಲ್‌ನೆಸ್ ಪ್ರಶ್ನೆ ಪತ್ರಿಕೆಗಳನ್ನು ಸಂಬಂಧಿಸಿದ ಶಾಲೆಗಳಿಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಿಂದ ಸಿದ್ಧಪಡಿಸಿ ಆಯಾಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ದಿನಾಂಕ:24.03.2017 ರೊಳಗೆ ತಲುಪಿಸಲಾಗುವುದು, ಮಂಡಳಿಯಿಂದ ಸ್ವೀಕರಿಸಿದ ಪ್ರಶ್ನೆ ಪತ್ರಿಕೆಗಳನ್ನು ಉಪನಿರ್ದೇಶಕರು ಸುರಕ್ಷಿತವಾಗಿ ಭದ್ರತೆಯನ್ನು ನೀಡಿ ಸಂರಕ್ಷಿಸುವುದು ಜಿಲ್ಲಾ ಉಪನಿರ್ದೇಶಕರು ಪರೀಕ್ಷಾ ದಿನಾಂಕದಂದು ಸಂಬಂದಿಸಿದ ಶಾಲೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆ ಪ್ರಾರಂಭವಾಗುವ ಅರ್ಧ ಗಂಟೆ ಮುಂಚಿತವಾಗಿ ವಿತರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ಹಂತ-2ರ ಅಭ್ಯರ್ಥಿಗಳಿಗೆ 30 ಅಂಕಗಳ(60 ಅಂಕಗಳಿಗೆ ಪರಿವರ್ತಿಸಿ) ಮಂಡಳಿಯಿಂದ ಸೈದ್ಧಾಂತಿಕ ಪರೀಕ್ಷೆಯನ್ನು ಈಗಾಗಲೇ ವೇಳಾ ಪಟ್ಟಿಯಲ್ಲಿ ಪ್ರಕಟಿಸಿರುವಂತೆ ನಡೆಸಲಾಗುವುದು. ಹಂತ-2ರ ಅಭ್ಯರ್ಥಿಗಳಿಗೆ 50 ಅಂಕಗಳ ಪ್ರಾಯೋಗಿಕ ಪರೀಕ್ಷೆ ಹಾಗೂ 20 ಅಂಕಗಳ ಸಿ.ಸಿ.ಇ. ಆಧಾರಿತ ಆಂತರಿಕ ಮೌಲ್ಯಮಾಪನವನ್ನು ಶಾಲಾ ಹಂತದಲ್ಲಿ ನಡೆಸಲಾಗುವುದು. ಸೈದ್ಧಾಂತಿಕ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆ ಹಾಗೂ ಸಿ.ಸಿ.ಇ. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಕ್ರೋಢೀಕರಿಸಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಬೇಕಾಗಿದೆ.

2016-17ನೇ ಸಾಲಿನಲ್ಲಿ ಹಂತ 01 ಮತ್ತು 02 ರಲ್ಲಿ ಎನ್.ಎಸ್.ಕ್ಯೂ.ಎಫ್. ಯೋಜನೆಯಡಿಯಲ್ಲಿ ವೃತ್ತಿ ಶಿಕ್ಷಣ ವಿಷಯವನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನವದೆಹಲಿಯ ಎನ್.ಎಸ್.ಡಿ.ಸಿ. ಅಡಿಯಲ್ಲಿ ಬರುವ ಸೆಕ್ಟಾರ್ ಸ್ಕಿಲ್ ಕೌನ್ಸಿಲ್‌ಗಳಿಂದ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ವೃತ್ತಿ ಶಿಕ್ಷಣ ವಿಷಯಗಳಲ್ಲಿ ಪ್ರಾಯೋಗಿಕ ಪರೀಕ್ಷೆಯನ್ನು ದಿನಾಂಕ:13.02.2017 ರಿಂದ ನಡೆಸಲು ಉದ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆ ನಡೆಸಲು ತುರ್ತಾಗಿ ಲಗತ್ತಿಸಿದ 02 ನಮೂನೆಯಲ್ಲಿ(School Data base ಮತ್ತು Student Data base) ಮಾಹಿತಿಯನ್ನು ಒದಗಿಸಬೇಕಾಗಿದೆ. ನಿಮ್ಮ ವ್ಯಾಪ್ತಿಯ ಶಾಲಾ ಕಾಲೇಜುಗಳಲ್ಲಿ ಪ್ರಾಯೋಗಿಕ ಪರೀಕ್ಷೆಯನ್ನು ತೆಗೆದುಕೊಳ್ಳಲಿರುವ ವಿದ್ಯಾರ್ಥಿಗಳ ಮತ್ತು ಶಾಲಾ ಮಾಹಿತಿಯನ್ನು ತರಿಸಿಕೊಂಡು ಪ್ರಾಯೋಗಿಕ ಪರೀಕ್ಷೆ ನಡೆಸಲು ಅಗತ್ಯ ಸಹಕಾರ ನೀಡುವಂತೆ ಮತ್ತು ವೃತ್ತಿ ಶಿಕ್ಷಣ ವಿಷಯದ ಸೈದ್ಧಾಂತಿಕದ 30 ಅಂಕಗಳು, ಸಿ.ಸಿ.ಇ.20 ಅಂಕಗಳು ಪ್ರಾಯೋಗಿಕ 50 ಅಂಕಗಳು ಸೇರಿ ಒಟ್ಟಾರೆ 100 ಅಂಕಗಳ ಪ್ರಮಾಣ ಪತ್ರವನ್ನು ಮಂಡಳಿ ಮತ್ತು ಎನ್.ಎಸ್.ಡಿ.ಸಿ. ಜಂಟಿಯಾಗಿ ನೀಡಬೇಕಾಗಿರುವುದರಿಂದ ಈ ಎಲ್ಲಾ ಅಂಕಗಳನ್ನು ತಮ್ಮ ಜಿಲ್ಲೆಗೆ ಸಂಬಂಧಿಸಿದ ಶಾಲಾ ಮುಖ್ಯಸ್ಥರು ಕ್ರೋಢೀಕರಿಸಿ ಮಂಡಳಿಗೆ ಸಲ್ಲಿಸುವಂತೆ ಸೂಚಿಸಿದೆ.

(ಯಶೋದ ಬೋಪಣ್ಣ)
ನಿರ್ದೇಶಕರು ಪರೀಕ್ಷೆಗಳು

**ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1. ರಾಜ್ಯದ ಆಯ್ದ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ (ಪರಿಶೀಲನಾ ಶಾಖೆಗಳ ಮೂಲಕ).
2. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಆದರ ಪೂರ್ವಕವಾಗಿ.

3. ಹೆಚ್ಚುವರಿ ಆಯುಕ್ತರು, ಧಾರವಾಡ /ಗುಲ್ಬರ್ಗಾ(ಪರಿಶೀಲನಾ ಶಾಖೆಗಳ ಮೂಲಕ) ಇವರಿಗೆ ಆದರ ಪೂರ್ವಕವಾಗಿ.
4. ನಿರ್ದೇಶಕರು, ಆರ್.ಎಂ.ಎಸ್.ಎ. ಸಾ.ಶಿ.ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರ ಮಾಹಿತಿಗಾಗಿ.
5. ನಿರ್ದೇಶಕರು, ಅಂಗವಿಕಲ ಮತ್ತು ಹಿರಿಯ ನಾಗರೀಕ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ವಂದನಾ ಪೂರ್ವಕವಾಗಿ.
6. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು ರವರ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.
7. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ(ಪರಿಶೀಲನಾ ಶಾಖೆಗಳ ಮೂಲಕ).
8. ರಾಜ್ಯದ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ,.ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ(ಪರಿಶೀಲನಾ ಶಾಖೆಗಳ ಮೂಲಕ).
9. ರಾಜ್ಯದ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ) ಅವರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಬಗ್ಗೆ ಮಾಹಿತಿ ಹಾಗೂ ದೃಢೀಕರಣ ನೀಡಲು ತಿಳಿಸಿದೆ.
10. ಮಂಡಳಿಯಲ್ಲಿನ ಆಪ್ತ ಶಾಖೆಗೆ/ ಎಲ್ಲಾ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ
10 ಮಂಡಳಿಯ ವೆಬ್‌ಸೈಟ್.
11. ಶಿಕ್ಷಣ ವಾರ್ತೆ
12. ಕಛೇರಿ ಪ್ರತಿ.

E:\A8 2016-17\NSQF Notification.docx

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003**

ಸಂಖ್ಯೆ:ಎ8/ಎನ್.ಎಸ್.ಕ್ಯೂ.ಎಫ್./24/2016-17 ದಿನಾಂಕ:01.03.2017.

# ಜ್ಞಾಪನ

ವಿಷಯ:-ಎನ್.ಎಸ್.ಕ್ಯೂ.ಎಫ್. ಯೋಜನೆ ಅಡಿಯಲ್ಲಿನ ಹಂತ-1ರ (9ನೇ ತರಗತಿ) ವೃತ್ತಿ ಶಿಕ್ಷಣ ಕೌಶಲ್ಯಗಳಲ್ಲಿ ಸೈಧ್ಧಾಂತಿಕ ಪರೀಕ್ಷೆ ನಡೆಸಲು ಜಿಲ್ಲಾವಾರು ಪ್ರಶ್ನೆ ಪತ್ರಿಕೆಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ:ಎ8/ಎನ್.ಎಸ್.ಕ್ಯೂ.ಎಫ್./24/ 2016-17, ದಿನಾಂಕ:06.02.2017.

********

2016-17ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್. ಯೋಜನೆ ಅಡಿಯಲ್ಲಿನ ಹಂತ-1 ಹಾಗೂ ಹಂತ-2 ರಲ್ಲಿ ತೃತೀಯ ಭಾಷೆಗೆ ವಿನಾಯಿತಿ ನೀಡಿ ವೃತ್ತಿ ಶಿಕ್ಷಣ ವಿಷಯಗಳಾದ ಮಾಹಿತಿ ಹಾಗೂ ತಂತ್ರಜ್ಞಾನ, ರಿಟೇಲ್, ಆಟೋ ಮೊಬೈಲ್, ಹೆಲ್ತ್ ಕೇರ್ ಮತ್ತು ಬ್ಯೂಟಿ ಅಂಡ್ ವೆಲ್‌ನೆಸ್‌ಗಳನ್ನು ಆಯ್ದ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ವೃತ್ತಿ ಶಿಕ್ಷಣದ ವಿಷಯಗಳಿಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ದಿನಾಂಕವನ್ನು ನಿಗದಿಪಡಿಸಿ ಪರೀಕ್ಷೆಯನ್ನು ನಡೆಸಲಾಗುವುದು. ಈ ಹಿನ್ನಲೆಯಲ್ಲಿ ರಾಜ್ಯಾದ್ಯಾಂತ ಎಲ್ಲಾ ಜಿಲ್ಲೆಗಳ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಹಂತ-1 ರ ವೃತ್ತಿ ಶಿಕ್ಷಣದ ವಿಷಯಗಳ ಪರೀಕ್ಷೆಯನ್ನು ನಡೆಸಲು ದಿನಾಂಕ:25.03.2017ರ ಮದ್ಯಾಹ್ನ ಸಮಯ 2 ರಿಂದ 4 ಗಂಟೆಯವರಗೆ ನಿಗದಿಪಡಿಸಿ ಪ್ರಕಟಿಸಲಾಗಿದೆ. ಈ ಸಂಬಂಧ ಅಗತ್ಯ ಕ್ರಮಕ್ಕಾಗಿ ಉಲ್ಲೇಖದನ್ವಯ ಆಯ್ದ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಉಪಪ್ರಾಂಶುಪಾಲರಿಗೆ ಸುತ್ತೋಲೆಯನ್ನು ರವಾನಿಸಲಾಗಿದೆ.

ಸಂಬಂಧಿಸಿದ ಶಾಲಾ ಮುಖ್ಯಸ್ಥರು ಹಂತ-1 ರಲ್ಲಿರುವ ಎರಡು ವೃತ್ತಿ ಶಿಕ್ಷಣ ವಿಷಯಗಳ ಪರೀಕ್ಷೆಗೆ ದಿನಾಂಕ:25.03.2017 ರಂದು ಬೇರೆ ವಿಷಯಗಳನ್ನು ನಿಗದಿ ಪಡಿಸಿ ಈಗಾಗಲೇ ವೇಳಾಪಟ್ಟಿಯನ್ನು ಸಿದ್ಧಪಡಿಸಿದ್ದರೂ ಸಹ ಸದರಿ ದಿನಾಂಕದಂದು ಬೆಳಿಗ್ಗೆ ಇತರೆ ವಿಷಯಗಳ ಪರೀಕ್ಷೆ ಮುಗಿದ ನಂತರ ಮದ್ಯಾಹ್ನ ಸಮಯ 2 ರಿಂದ 4 ಗಂಟೆಯವರೆಗೆ ವೃತ್ತಿ ಶಿಕ್ಷಣ ವಿಷಯಗಳ ಪರೀಕ್ಷೆ ನಡೆಸಲು ತಿಳಿಸಿದೆ.

ವೃತ್ತಿ ಶಿಕ್ಷಣದ ವಿಷಯಗಳಾದ ಮಾಹಿತಿ ಹಾಗೂ ತಂತ್ರಜ್ಞಾನ, ರಿಟೇಲ್, ಆಟೋ ಮೊಬೈಲ್, ಹೆಲ್ತ್ ಕೇರ್ ಮತ್ತು ಬ್ಯೂಟಿ ಅಂಡ್ ವೆಲ್‌ನೆಸ್ ಪ್ರಶ್ನೆ ಪತ್ರಿಕೆಗಳನ್ನು ಸಂಬಂಧಿಸಿದ ಶಾಲೆಗಳಿಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಿಂದ ಸಿದ್ಧಪಡಿಸಿ ಆಯಾಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಮಾರ್ಗದ(ರೂಟ್) ಮುಖಾಂತರ ನಿಗದಿ ಪಡಿಸಿದ ಪರೀಕ್ಷಾ ದಿನಾಂಕದ ಮೂರು ದಿವಸ ಮುಂಚೆ ತಲುಪಿಸಲಾಗುವುದು. ಉಪನಿರ್ದೇಶಕರು ಸ್ವೀಕರಿಸಿದ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತವಾಗಿ ಅಲ್ಮೇರಾದಲ್ಲಿಟ್ಟು ಮೊಹರು ಹಾಕಿ ಭದ್ರತೆಯನ್ನು ನೀಡಿ ಸಂರಕ್ಷಿಸುವ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳುವುದು.

ಜಿಲ್ಲಾ ಉಪನಿರ್ದೇಶಕರು ಪರೀಕ್ಷಾ ದಿನಾಂಕದಂದು ಸಂಬಂಧಿಸಿದ ಶಾಲೆಗಳಿಗೆ ಪರೀಕ್ಷೆ ಪ್ರಾರಂಭವಾಗುವ ಅರ್ಧ ಗಂಟೆ ಮುಂಚಿತವಾಗಿ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಶಿಕ್ಷಣಾಧಿಕಾರಿಗಳು/ವಿಷಯ ಪರಿವೀಕ್ಷಕರ ತಂಡ ಮಾಡಿ ಮಾರ್ಗದ ಮುಖಾಂತರ ಪ್ರಶ್ನೆ ಪತ್ರಿಕೆಗಳನ್ನು ಶಾಲಾ ಮುಖ್ಯಶಿಕ್ಷಕರಿಗೆ ತಲುಪಿಸಿ ಸ್ವೀಕೃತಿ ಪಡೆಯಲು ತಿಳಿಸಿದೆ. ಹಾಗೂ ವೃತ್ತಿ ಶಿಕ್ಷಣ ವಿಷಯಗಳ ಪರೀಕ್ಷೆಯಾದ ನಂತರ ಪರೀಕ್ಷೆಗೆ ಹಾಜರಾದ ಹಾಗೂ ಗೈರು ಹಾಜರಾದ

ಅಭ್ಯರ್ಥಿಗಳ ವಿವರದೊಂದಿಗೆ ನಿರ್ದೇಶಕರು, ಪರೀಕ್ಷೆಗಳು, ಕ.ಪ್ರೌ.ಶಿ.ಪ.ಮಂಡಳಿ, ಮಲ್ಲೇಶ್ವರಂ, 6ನೇ ಅಡ್ಡರಸ್ತೆ, ಬೆಂಗಳೂರು ಇವರಿಗೆ ವರದಿ ನೀಡಲು ಸೂಚಿಸಿದೆ.

(ಯಶೋದ ಬೋಪಣ್ಣ)
ನಿರ್ದೇಶಕರು ಪರೀಕ್ಷೆಗಳು

ಪ್ರತಿಯನ್ನು

1. ಉಪನಿರ್ದೇಶಕರು(ಆಡಳಿತ), ಸಾ.ಶಿ.ಇಲಾಖೆ, ________________ ಜಿಲ್ಲೆ ಇವರ ಸೂಕ್ತ ಕ್ರಮಕ್ಕಾಗಿ.
2. ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ________________ ತಾಲ್ಲೂಕು ಇವರ ಅಗತ್ಯ ಕ್ರಮಕ್ಕಾಗಿ.
3. ನಿರ್ದೇಶಕರು, ಆರ್.ಎಂ.ಎಸ್.ಎ., ಸಾ.ಶಿ.ಇಲಾಖೆ, ನೃಪತುಂಗ ರಸ್ತೆ, ಇವರಿಗೆ ಮಾಹಿತಿಗಾಗಿ.
4. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ.
5. ಅಪರ ಆಯುಕ್ತರು, ಧಾರವಾಡ /ಕಲಬುರಗಿ ಇವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ.
6. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು/ಬೆಳಗಾವಿ/ಕಲಬುರಗಿ,ಇವರಿಗೆ ಮುಂದಿನ ಕ್ರಮಕ್ಕಾಗಿ;
7. ಮಂಡಳಿಯಲ್ಲಿನ ಆಪ್ತ ಶಾಖೆಗೆ/ ಎಲ್ಲಾ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ
8. ಸಂಬಂಧಿಸಿದ 100 ಶಾಲೆಗಳ ಮುಖ್ಯಸ್ಥರ ಮಾಹಿತಿಗಾಗಿ.
9. ಕಛೇರಿ ಪ್ರತಿ.

E:\A8 2016-17\NSQF Notification.docx